## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-2ರಡಿ ಪ್ಯಾಕೇಜ್ ಸಂಖ್ಯೆ:ಕೆಎಸ್-25-15 ಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಉದ್ಭವಿಸಿರುವ ತಕರಾರು ವಿಷಯವನ್ನು ಪರಿಹರಿಸಲು ಅಧಿಕಾರಯುಕ್ತ ಸ್ಥಾಯಿ ಸಮಿತಿಯನ್ನು (Standing Empowered Committee) ರಚಿಸುವ ಕುರಿತು.

ಓದಲಾಗಿದೆ: SBD ಕ್ಲಾಸ್ ಕಂಡಿಕೆ 24.3ರನ್ವಯ.

**ಪ್ರಸ್ತಾವನೆ:**

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-2ರಡಿ ಪ್ಯಾಕೇಜ್ ಸಂಖ್ಯೆ:ಕೆಎಸ್-25-15 ರ ಕಾಮಗಾರಿಯನ್ನು ಶ್ರೀ ಎಂ.ಜಿ. ಶಿವಶಂಕರಸ್ವಾಮಿ, ಗುತ್ತಿಗೆದಾರರಿಗೆ ಟೆಂಡರ್ ಆಧಾರದ ಮೇಲೆ ವಹಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ:25-15 ಕಾಮಗಾರಿಯನ್ನು ದಿನಾಂಕ:20-3-2013 ರಂದು ಪಾರಂಭಿಸಿ ದಿನಾಂಕ:19-2-2014ರೊಳಗೆ ಪೂರ್ಣಗೊಳಿಸಬೇಕಾಗಿತ್ತು. ಗುತ್ತಿಗೆದಾರರು ಪಗತಿ ನೀಡಲು ವಿಫಲರಾದ ಕಾರಣ ಸದರಿ ಗುತ್ತಿಗೆಯನ್ನು ದಿನಾಂಕ:11-9-2014ರಲ್ಲಿ ಅಂತಿಮಗೊಳಿಸಲಾಗಿದೆ. ಅದರಂತೆ, ದಿನಾಂಕ:11-9-2014ರಲ್ಲಿ ಗುತ್ತಿಗೆಯನ್ನು ಗುತ್ತಿಗೆ ಕರಾರು ಕಂಡಿಕೆ-52.2 (ಹೆಚ್) ರನ್ವಯ ರದ್ದುಪಡಿಸಲಾಗಿರುತ್ತದೆ. ಗುತ್ತಿಗೆದಾರರು ವಿವಿಧ ಕಾರಣಗಳ ನಿಮಿತ್ತ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲವೆಂದು ಮತ್ತೊಂದು ಅವಕಾಶ ನೀಡಿ ಕಾಲಾವಧಿ ವಿಸ್ತರಣೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಸದರಿ ಕಾಮಗಾರಿಯ ವಿವಾದವನ್ನು ಇತ್ಯರ್ಥಗೊಳಿಸಲು ಟೆಂಡರ್ ನಿಯಮ 24.3 ರನ್ವಯ ಅಧಿಕಾರಯುಕ್ತ ಸ್ಥಾಯಿ ಸಮಿತಿಯನ್ನು ರಚಿಸಬೇಕಾಗಿರುತ್ತದೆ. ಅದರಂತೆ ಈ ಅದೇಶ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:28:ಆರ್‌ಆರ್‌ಸಿ:2015 (ಭಾ-1) ಬೆಂಗಳೂರು, ದಿನಾಂಕ:18-4-2015.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-2ರಡಿ ಪ್ಯಾಕೇಜ್ ಸಂಖ್ಯೆ:ಕೆಎಸ್-25-15 ರ ಟೆಂಡರ್ ಕರಾರಿನಲ್ಲಿ ನಿಯಮಾವಳಿಯಲ್ಲಿರುವ ಅವಕಾಶದಂತೆ, ವಿವಾದವನ್ನು ಬಗೆಹರಿಸಲು ಅಧಿಕಾರಯುಕ್ತ ಸ್ಥಾಯಿ ಸಮಿತಿ (Standing Empowered Committee) ಯನ್ನು ರಚಿಸಲಾಗಿದ್ದು, ಸಮಿತಿಗೆ ಈ ಕೆಳಕಂಡಂತೆ ಅಧ್ಯಕ್ಷರು ಹಾಗೂ ಸದಸ್ಯರ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

**ವಿವರಗಳು**

| | | |
|---|---|---|
| 1 | ಅಧ್ಯಕ್ಷರು | ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ |
| 2 | ಸದಸ್ಯರು | ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ , ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ |
| 3 | ಸದಸ್ಯರು | ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು |
| 4 | ಸದಸ್ಯರು | ಮೃತ್ಯುಂಜಯ, ನಿವೃತ್ತ ಮುಖ್ಯ ಅಭಿಯಂತರರು (ಗುತ್ತಿಗೆ ದಾರರ ಕೋರಿಕೆಯಂತೆ ) |

| | | |
|---|---|---|
| 5 | ಸದಸ್ರರು | ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

18/5/18

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲಕರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲಕರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲಕರು (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು-9
8. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು-9.
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
10. ಮಾಹಿತಿ ಕೇಂದ್ರಕ್ಕೆ/ ಹೆಚ್ಚುವರಿ ಪ್ರತಿಗಳು.